ಸದನವು 1.35ಕ್ಕೆ ಮುಕ್ತಾಯವಾಯಿತು.

(ಸದನವು ಮತ್ತೆ ಮಧ್ಯಾಹ್ನ 2 ಘಂಟೆ 2 ನಿಮಿಷಕ್ಕೆ ಸಮಾವೇಶಗೊಂಡಿತು.)

ಮಾನ್ಯ ಸಭಾಧ್ಯಕ್ಷರು (ಶ್ರೀ ಎಸ್.ಎಂ. ಕೃಷ್ಣ) ಪೀಠದಲ್ಲಿದ್ದರು.

ರಾಜ್ಯಪಾಲರ ಭಾಷಣದ ಪ್ರತಿಯನ್ನು ಸಭೆಯ ಮುಂದಿಡುವುದು.

ಕಾರ್ಯದರ್ಶಿಯವರು : ಸನ್ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಪ್ರತಿಯನ್ನು ಸಭೆಯ ಮುಂದಿಡುತ್ತೇನೆ.

ಸಂತಾಪ ಸೂಚನೆಗಳು

ಅಧ್ಯಕ್ಷರು : ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಎಫ್.ಎಸ್. ಪಾಟೀಲ್ ಹಾಗೂ ಶ್ರೀ ಸಿ.ಆರ್. ಬಸಪ್ಪ ಮತ್ತು ಪ್ರಜಾಪ್ರತಿನಿಧಿ ಸಭಾ ಸದಸ್ಯರಾಗಿದ್ದ ಶ್ರೀ ವಿ.ವಿ.ಅಯ್ಯರ್ ಅವರುಗಳು ನಿಧನರಾದ ಸುದ್ದಿಯನ್ನು ನೊಂದ ಮನಸ್ಸಿನಿಂದ ಈ ಸದನಕ್ಕೆ ತಿಳಿಸುತ್ತಿದ್ದೇನೆ.

1. ನಾಲ್ಕು ಮತ್ತು ಆರನೇ (1967-71 ಮತ್ತು 1978-83) ವಿಧಾನಸಭೆಯ ಸದಸ್ಯರಾಗಿದ್ದ ಶ್ರೀ ಎಫ್.ಎಸ್. ಪಾಟೀಲರು ಜನವರಿ 9,1991ರಂದು ಕಲ್ಲಟಗಿಯಲ್ಲಿ ಶಿವಾಧೀನರಾದರು. ಸ್ವತಃ ಕೃಷಿಕರಾಗಿದ್ದ ಈ ಮಹನೀಯರು ಅನೇಕ ಸಂಘಸಂಸ್ಥೆಗಳೊಡನೆ ನಿಕಟ ಸಂಪರ್ಕ ಹೊಂದಿದ್ದು ಪರಿಶಿಷ್ಟ ವರ್ಗದ ಆ ಕೃಷಿ ಕಾರ್ಮಿಕರ ಹಾಗೂ ಹಿಂದುಳಿದ ವರ್ಗದವರ ಏಳಿಗೆಗಾಗಿ ಆಜೀವಪರ್ಯಂತ ಶ್ರಮಿಸಿದವರು.

2. ಭಾರತದ ಸಂವಿಧಾನ ಸಭೆ (1948-50) ರಾಜ್ಯ ವಿಧಾನಸಭೆ (1950-52) ಹಾಗೂ ಒಂದು, ಎರಡು ಮತ್ತು ಮೂರನೆಯ ಲೋಕಸಭೆಯ (1952-67) ಸದಸ್ಯರಾಗಿದ್ದ ಶ್ರೀ ಸಿ.ಆರ್. ಬಸಪ್ಪನವರು ಜನವರಿ 29,1991ರಂದು ತುಮಕೂರಿನಲ್ಲಿ ಶಿವಾಧೀನರಾದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದ ಶ್ರೀಯುತರು ಭಾರತೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದ ಶ್ರೀಯುತರು ಭಾರತೀಯ ರೈಲ್ವೆ ಸೇವಾ ಆಯೋಗ (ದಕ್ಷಿಣ) ಅಧ್ಯಕ್ಷರಾಗಿಯೂ ಶ್ಲಾಘನೀಯ ಸೇವೆ ಸಲ್ಲಿಸಿದ್ದರು.

3. ಎರಡು ಬಾರಿ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದ (1930-36) ಶ್ರೀ ವಿ. ವೆಂಕಟಸ್ವಾಮಿ ಅಯ್ಯರ್‌ರವರು ಫೆಬ್ರವರಿ 25, 1991ರಂದು ತಮ್ಮ 104ನೇ ವಯಸ್ಸಿನಲ್ಲಿ ಭದ್ರಾವತಿಯಲ್ಲಿ ದೈವಾಧೀನರಾದರು. ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದ ಶ್ರೀಯುತರು ಭದ್ರಾವತಿ ಪುರಸಭೆಯ ಉಪಾಧ್ಯಕ್ಷರಾಗಿ ಸ್ಮರಣೀಯ ಸೇವೆ ಸಲ್ಲಿಸಿದ್ದಾರೆ.

ಈ ಮಹನೀಯರ ಗೌರವಾರ್ಥ ಮಾನ್ಯ ಸದಸ್ಯರು ಎದ್ದುನಿಂತು ಒಂದು ನಿಮಿಷ ಮೌನವನ್ನು ಆಚರಿಸಿ ಸದನದ ಸಂತಾಪವನ್ನು ವ್ಯಕ್ತಪಡಿಸಬೇಕೆಂದು ಕೋರುತ್ತೇನೆ.

(ಮಾನ್ಯ ಸದಸ್ಯರೆಲ್ಲರೂ ಎದ್ದುನಿಂತು ಒಂದು ನಿಮಿಷ ಮೌನವನ್ನಾಚರಿಸಿ ಶ್ರದ್ಧಾಂಜಲಿ ಸಲ್ಲಿಸಿದರು).

ಅಧ್ಯಕ್ಷರು : ದಿವಂಗತರ ಕುಟುಂಬ ವರ್ಗದವರಿಗೆ ಈ ಸಭೆ ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಕಳುಹಿಸಲಾಗುವುದು.

3. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಅ) ಶ್ರೀ ಬಿ. ಬಸವಲಿಂಗಪ್ಪ -(ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ಪಶುಸಂಗೋಪನಾ ಮಂತ್ರಿ): ಭಾರತ ಸಂವಿಧಾನದ 213(1)ನೇ ಅನುಚ್ಛೇದದ ಮೇರೆಗೆ:

"1991ನೇ ಇಸವಿಯ ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯತ್, ಮಂಡಲ ಪಂಚಾಯತ್‌ಗಳ ಮತ್ತು ನ್ಯಾಯ ಪಂಚಾಯತ್‌ಗಳ (ತಿದ್ದುಪಡಿ) ಅಧ್ಯಾದೇಶ (1991ನೇ ಇಸವಿಯ 2ನೇ ಸಂಖ್ಯೆಯ ಅಧ್ಯಾದೇಶ)"ವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಆ) ಶ್ರೀ ಕೆ.ಜೆ.ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿ): ಭಾರತ ಸಂವಿಧಾನದ 213(1) ಅನುಚ್ಛೇದದ ಮೇರೆಗೆ:

"1991ನೇ ಇಸವಿಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧ್ಯಾದೇಶ (1991ನೇ ಇಸವಿಯ 1ನೇ ಸಂಖ್ಯೆಯ ಅಧ್ಯಾದೇಶ)ವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

4. **ಕಾರ್ಯದರ್ಶಿಯವರ ವರದಿ**

ಇ) ಕಾರ್ಯದರ್ಶಿಯವರು: ಕಳೆದ ವರದಿಯ ನಂತರ ರಾಜ್ಯಪಾಲರಿಂದ ಅಥವಾ ರಾಷ್ಟ್ರಾಧ್ಯಕ್ಷರಿಂದ ಒಪ್ಪಿಗೆ ಪಡೆಯಲಾದ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಕ್ರಮ ಸಂಖ್ಯೆ	ವಿಧೇಯಕದ ಹೆಸರು	ಒಪ್ಪಿಗೆಯನ್ನು ಪಡೆದ ದಿನಾಂಕ	ಒಪ್ಪಿಗೆಯನ್ನು ನೀಡಿದವರು
1.	2.	3.	4.
1.	೧೯೯೦ನೇ ಇಸವಿಯ ಕರ್ನಾಟಕ ಧನ ವಿನಿಯೋಗ (ನಂ.3) ವಿಧೇಯಕ	.24-12-1990	ರಾಜ್ಯಪಾಲರು
2.	೧೯೯೦ನೇ ಇಸವಿಯ ಕರ್ನಾಟಕ ಭೂ ಸುಧಾರಣಾ (ಎರಡನೇ ತಿದ್ದುಪಡಿ) ವಿಧೇಯಕ	02-02-1990	ರಾಜ್ಯಪಾಲರು
3.	೧೯೯೦ನೇ ಇಸವಿಯ ಕರ್ನಾಟಕ ಇನಾಮುಗಳ ರದ್ದಿಯಾತಿ ಕಾನೂನುಗಳ (ತಿದ್ದುಪಡಿ) ವಿಧೇಯಕ	02-02-1991	ರಾಜ್ಯಪಾಲರು
4.	೧೯೯೦ನೇ ಇಸವಿಯ ಕರ್ನಾಟಕ ಹಿಡುವಳಿಗಳ ತುಂಡೀಕರಣ ನಿರೋಧ ಮತ್ತು ಸಂಯೋಜನಾ (ನಿರಸನ) ವಿಧೇಯಕ	02-02-1991	ರಾಜ್ಯಪಾಲರು
5.	೧೯೯೦ನೇ ಇಸವಿಯ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ	02-02-1991	ರಾಜ್ಯಪಾಲರು
6.	೧೯೯೦ನೇ ಇಸವಿಯ ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ	02-02-1991	ರಾಜ್ಯಪಾಲರು
7.	೧೯೯೦ನೇ ಇಸವಿಯ ಕರ್ನಾಟಕ ಸಚಿವರ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ	02-02-1991	ರಾಜ್ಯಪಾಲರು

ಅಧ್ಯಕ್ಷರು : ಕಾಗದಪತ್ರಗಳನ್ನು ಸಭೆಯ ಮುಂದಿಡಲಾಗಿದೆ. ಈಗ ಸದನವು ಮುಂದೂಡಲ್ಪಟ್ಟು ಮತ್ತೆ ಸೋಮವಾರ (ದಿನಾಂಕ 4-3-1991) ಬೆಳಿಗ್ಗೆ 11-00 ಘಂಟೆಗೆ ಸಮಾವೇಶಗೊಳ್ಳಲಿದೆ.

(ಸದನವು 2ಗಂಟೆ 8 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ ದಿನಾಂಕ 4-3-1991ರಂದು ಸೋಮವಾರ ಬೆಳಿಗ್ಗೆ 11 ಘಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು.)